FEBRUARY 19, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

- **ರಾಜ್ಯ ಸರ್ಕಾರದಿಂದ,** 32 ಲಕ್ಷ ಅನಧಿಕೃತ ಬಡಾವಣೆಗಳಿಗೆ, 'ಬಿ ಖಾತಾ' ನೀಡುವ, ಒಂದಾವರ್ತಿ, ವಿಶೇಷ ಅಭಿಯಾನ.
- **ಉದಯಪುರದಲ್ಲಿ ಆಯೋಜಿತ,** ರಾಜ್ಯ ಜಲ ಸಂಪನ್ಮೂಲ ಸಚಿವರ ಸಮ್ಮೇಳನ, ಇಂದು ಸಮಾರೋಪ.
- **ಪ್ರಧಾನಮಂತ್ರಿ ಕುಸುಮ್–ಸಿ ಯೋಜನೆ;** 3 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ, ರಾಜ್ಯದ ಗುರಿ.
- **ಬೆಂಗಳೂರಿನಲ್ಲಿ, 26 ರಿಂದ 28ರ ವರೆಗೆ,** KITE' ಪ್ರವಾಸೋದ್ಯಮ ಪ್ರದರ್ಶಿನಿ.

<><><>

**ರಾಜ್ಯಾದ್ಯಂತ, ನಗರ, ಪಟ್ಟಣ,** ಪಾಲಿಕೆ ಮತ್ತು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ, 32 ಲಕ್ಷ ಅನಧಿಕೃತ ಬಡಾವಣೆಗಳಿಗೆ, ಒಂದು ಬಾರಿ 'ಬಿ' ಖಾತಾ ನೀಡಿ, ಅಂತ್ಯ ಹಾಡಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟ ಪಡಿಸಿದ್ದಾರೆ. ರಾಜ್ಯದ ಮಹಾನಗರ ಪಾಲಿಕೆ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ–ಖಾತಾ ನೀಡುವ ಕುರಿತು, ಜಿಲ್ಲಾಧಿಕಾರಿಗಳು, ಯೋಜನಾ ನಿರ್ದೇಶಕರು ಸೇರಿದಂತೆ, ಇತರೆ ಅಧಿಕಾರಿಗಳೊಂದಿಗೆ, ಬೆಂಗಳೂರಿನಲ್ಲಿ ವಿಡಿಯೊ ಸಂವಾದ ನಡೆಸಿದರು. ಕಂದಾಯ ಪಾವತಿ ಮಾಡದಿರುವುದೇ, ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಮುಂದಿನ ಮೂರು ತಿಂಗಳಲ್ಲಿ, ವಿಶೇಷ ಅಭಿಯಾನ ಕೈಗೊಂಡು, ಅಧಿಕೃತ ಕಂದಾಯ ಬಡಾವಣೆ ಆರಂಭವಾಗುವಂತೆ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

<><><>

**ರಾಜ್ಯ ಜಲ ಸಂಪನ್ಮೂಲ** ಸಚಿವರ, ಅಖಿಲ ಭಾರತ 2ನೇ ಆವೃತ್ತಿಯ ಸಮ್ಮೇಳನ, ರಾಜಸ್ಥಾನದ ಉದಯಪುರದಲ್ಲಿ ಆಯೋಜಿತವಾಗಿದೆ. 'ಇಂಡಿಯಾ @ 2047' ಜಲ ಸುರಕ್ಷಿತ ರಾಷ್ಟ್ರ, ಸಮ್ಮೇಳನದ ಧ್ಯೇಯವಾಗಿದೆ. ನೀರಾವರಿ ಖಾತೆ ಸಚಿವ ಡಿ.ಕೆ.ಶಿವಕುಮಾರ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಾರೆ. ಮೇಕೆದಾಟು, ಮಹಾದಾಯಿ, ನವಲಿ ಯೋಜನೆ ಸೇರಿದಂತೆ, ಅಣೆಕಟ್ಟು ದುರಸ್ತಿ, ಹೂಳೆತ್ತುವುದು ಹಾಗೂ ಭದ್ರಾ ಸೇರಿದಂತೆ, ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಿಗೆ, ಕೇಂದ್ರದಿಂದ ಅನುದಾನ ಒದಗಿಸಲು, ಅವರು ಸಭೆಯಲ್ಲಿ

ಸಮಾಲೋಚಿಸಿದರು. ಇಂದು ಸಮಾರೋಪ ಗೊಳ್ಳಲಿರುವ ಈ ಸಮ್ಮೇಳನ, ಭಾರತದ ಜಲ ಭದ್ರತೆಯ ಭವಿ ್ಯವನ್ನು ರೂಪಿಸುವಲ್ಲಿ, ಮಹತ್ವದ ಮೈಲುಗಲ್ಲು ಎಂದು, ಪರಿಗಣಿಸಲಾಗಿದೆ.

<><><>

**ಕಾರ್ಮಿಕರಿಗೆ ಕನಿ ್ಠ ವೇತನ** ಹಾಗೂ ವಿವಿಧ ಸೌಲಭ್ಯಗಳನ್ನು, ಗುತ್ತಿಗೆ ಏಜೆನ್ಸಿಗಳು ನಿಯಮಿತವಾಗಿ ಪಾವತಿಸಿರುವ ಬಗ್ಗೆ, ಪರಿಶೀಲಿಸಿ ಪ್ರತಿ ತಿಂಗಳು ವರದಿ ಸಲ್ಲಿಸುವಂತೆ, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ್ ಅಧಿಕಾರಿಗಳಿಗೆ, ಸೂಚಿಸಿದ್ದಾರೆ. ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ಕಾರ್ಮಿಕ ಇಲಾಖೆಯ ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು.

ನಿಯಮಾನುಸಾರ ವೇತನ ಪಾವತಿಸದ ಏಜೆನ್ಸಿಗಳ ಪರವಾನಿಗೆಯನ್ನು, ರದ್ದು ಪಡಿಸುವಂತೆ, ಸಚಿವರು ಕಟ್ಟುನಿಟ್ಟಿನ ಸೂಚನೆ ನೀಡಿದರು. ಕರ್ನಾಟಕ ಅಭಿವೃದ್ಧಿ ಯೋಜನೆ, ಕೆಡಿಪಿ ಸಭೆಯಲ್ಲಿ, ಬಾಲ ಹಾಗೂ ಕಿಶೋರ ಕಾರ್ಮಿಕರ ಬಗ್ಗೆ ಪರಿಶೀಲನಾ ವರದಿ, ಪೊಲೀಸ್ ಅಧಿಕಾರಿಗಳು ಕೈಗೊಂಡ ಕ್ರಮದ ವರದಿ, ಪ್ರತಿ ತಿಂಗಳು ಸಲ್ಲಿಸುವಂತೆ ಅವರು ನಿರ್ದೇಶಿಸಿದರು.

<><><>

**ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ,** 144 ವರ್ಷಗಳ ಬಳಿಕ ಆಯೋಜಿತ, 45 ದಿನಗಳ ಮಹಾ ಕುಂಭಮೇಳದಲ್ಲಿ, ಈ ವರೆಗೆ 53 ಕೋಟಿ ಜನ, ತ್ರಿವೇಣಿ ಸಂಗಮದಲ್ಲಿ, ಪುಣ್ಯ ಸ್ನಾನ ಕೈಗೊಂಡಿದ್ದಾರೆ. ಈ ತಿಂಗಳ 26ರ ವರೆಗೆ ಮೇಳ ನಡೆಯಲಿದೆ.

<><><>

**ಭಾರತೀಯ ರೇಲ್ವೆ,** ಕೋಟ್ಯಂತರ ಜನ ಯಾತ್ರಿಕರ, ಸುಗಮ ಸಾರಿಗೆಯನ್ನು ಖಾತ್ರಿ ಪಡಿಸಲು, ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. 12 ಸಾವಿರದ 5 ನೂರಾ 83, ರೈಲುಗಳನ್ನು ಈ ವರೆಗೆ ಓಡಿಸಲಾಗಿದೆ. 3 ಕೋಟಿ 9 ಲಕ್ಷ ಪ್ರಯಾಣಿಕರು ಭಾರತೀಯ ರೇಲ್ವೆ ಸೇವೆ ಬಳಸಿಕೊಂಡಿದ್ದಾರೆ.

<><><>

**ಕುಂಭ ಮೇಳಕ್ಕಾಗಿ,** ಕಳೆದ 3 ವ ೯ಗಳಲ್ಲಿ, ಭಾರತೀಯ ರೇಲ್ವೆ 5 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ, ಬೃಹತ್ ಲಾಜಿಸ್ಟಿಕ್ಸ್ ವ್ಯವಸ್ಥೆ ಸಿದ್ಧ ಪಡಿಸಿದೆ. ರೇಲ್ವೆ ನಿಲ್ದಾಣಗಳನ್ನು ನವೀಕರಿಸಿ, ಮೇಲ್ದರ್ಜೆಗೇರಿಸಲಾಗಿದೆ. 3 ಸಾವಿರದ 7 ನೂರು ಕೋಟಿ ರೂಪಾಯಿ ವೆಚ್ಚದಲ್ಲಿ, ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ಪಡಿಸಿದೆ.

<><><>

**ಪ್ರಮುಖ ನಿಲ್ದಾಣಗಳಲ್ಲಿ,** ಕನ್ನಡ ಸೇರಿದಂತೆ 12 ಭಾ ೆಗಳಲ್ಲಿ ಪ್ರಕಟಣೆಗಳನ್ನು ಉದ್ಘೋಷಿಸಲಾಗುತ್ತಿದೆ. 13 ಸಾವಿರ ರೇಲ್ವೆ ರಕ್ಷಣಾ ಪಡೆ ಸಿಬ್ಬಂದಿ, 10 ಸಾವಿರ ರೇಲ್ವೆ ಪೊಲೀಸ್ ಹಾಗೂ ಅರೆ ಸೈನಿಕ ಸಿಬ್ಬಂದಿ ಸೇರಿದಂತೆ, 3 ಸಾವಿರ ಸಂಚಾರಿ ಸಿಬ್ಬಂದಿ, ಮಹಾ ಕುಂಭ ಮೇಳದ ಯಾತ್ರಿಗಳ ಸುಗಮ ಸಂಚಾರಕ್ಕೆ ಹಗಲಿರುಳು ಶ್ರಮಿಸುತ್ತಿದ್ದಾರೆ.

<><><>

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ** ಇಲಾಖೆ ಸಂಲಗ್ನತೆಯ, ಧಾರವಾಡ ಜಿಲ್ಲೆ ಹುಬ್ಬಳ್ಳಿಯ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ನ, ಚುನಾವಣಾ ಸಾಕ್ಷರತಾ ಕ್ಲಬ್, 2024–25 ನೇ ಸಾಲಿನ ಅತ್ಯುತ್ತಮ ಚುನಾವಣಾ ಸಾಕ್ಷರತಾ ಕ್ಲಬ್ ರಾಜ್ಯ ಪ್ರಶಸ್ತಿಗೆ ಭಾಜನವಾಗಿದೆ. ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಸರ್ಕಾರಿ

ಮಹಿಳಾ ಪಾಲಿಟೆಕ್ನಿಕನ ಕರ್ಮರ್ಷಿಯಲ್ ಪ್ರಾಕ್ಟೀಸ್ ಅಧ್ಯಯನ ವಿಭಾಗದ ಉಪನ್ಯಾಸಕಿ ಹಾಗೂ ಕ್ಲಬ್‌ನ ನೋಡಲ್ ಅಧಿಕಾರಿ ಮೇಧಾ ಜಯವಂತ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಪ್ರಧಾನಮಂತ್ರಿ ಕುಸುಮ್–ಸಿ ಯೋಜನೆ,** ಕೇಂದ್ರದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ; ಮುಂಬರುವ ಒಂದೂವರೆ ವರ್ಷದಲ್ಲಿ, 3 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯ ಗುರಿ ಹೊಂದಲಾಗಿದೆ ಎಂದು, ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ. ದಾವಣಗೆರೆಯಲ್ಲಿ, ಇಂಧನ ಇಲಾಖೆಯ ಪ್ರಗತಿ ಪರಿಶೀಲಿಸಿ, ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಪ್ರಸಕ್ತ ಬೇಸಿಗೆಯಲ್ಲಿ, ರಾಜ್ಯದ ಸಂಭವನೀಯ ವಿದ್ಯುತ್ ಕೊರತೆ ನಿಭಾಯಿಸಲು, ಪಂಜಾಬ್ ಹಾಗೂ ಉತ್ತರ ಪ್ರದೇಶದಿಂದ ವಿದ್ಯುತ್ ಪೂರೈಕೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. 18 ಸಾವಿರದ 500 ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ಇದೆ ಎಂದರು.

<><><>

**ಪ್ರವಾಸೋದ್ಯಮ ಇಲಾಖೆ,** ಇದೇ 26 ರಿಂದ 28ರ ವರೆಗೆ, ಬೆಂಗಳೂರಿನಲ್ಲಿ 'Karnataka International Travel Expo (KITE)' ಎರಡನೇ ಆವೃತ್ತಿಯ ಪ್ರದರ್ಶಿನಿ, ಆಯೋಜಿಸಿದೆ ಎಂದು, ಉತ್ತರಕನ್ನಡ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ಸಾಹಸ ಪ್ರವಾಸೋದ್ಯಮ, ವ್ಯಾಪಾರ ಅವಕಾಶ ಹಾಗೂ ಜಾಗತಿಕ ಮಟ್ಟದ ಪ್ರವಾಸ ತಾಣವಾಗಿ, ಕರ್ನಾಟಕದ ಸ್ಥಾನವನ್ನು ಬಲಪಡಿಸಲು, ಈ ಪ್ರದರ್ಶಿನಿ ಆಯೋಜಿತವಾಗಿದೆ. 400ಕ್ಕೂ ಹೆಚ್ಚು ಆಸಕ್ತ ಸಂಸ್ಥೆಗಳು, 30ಕ್ಕೂ ಹೆಚ್ಚು ದೇಶಗಳಿಂದ 50 ಜಾಗತಿಕ ಪ್ರವಾಸೋದ್ಯಮ ಸಂಸ್ಥೆಗಳು ಪಾಲ್ಗೊಳ್ಳಲಿವೆ. ಉತ್ತರಕನ್ನಡ ಜಿಲ್ಲೆಯ, ಪ್ರವಾಸೋದ್ಯಮ ಕ್ಷೇತ್ರದ ಎಲ್ಲ ಹಿತಾಸಕ್ತಿ ಪಾಲುದಾರರು ಪಾಲ್ಗೊಳ್ಳಲು, ಅವಕಾಶ ಕಲ್ಪಿಸಲಾಗಿದೆ ಎಂದು ಅವರು ಹೇಳಿದರು.

<><><>

**'ಲಿಟಲ್ ಪ್ಲಾನೆಟ್; ಅ ಟೇಲ್ ಆಫ್ ಫ್ರಾಗ್ಸ್',** ಪಶ್ಚಿಮ ಘಟ್ಟದ ಕಾಡಿನಲ್ಲಿ ಸತತ 9 ವರ್ಷಗಳ ಕಾಲ, ಮಳೆಗಾಲದ ಸಂದರ್ಭದಲ್ಲಿ ಸೆರೆ ಹಿಡಿದ, ಅಪರೂಪದ ಕಪ್ಪೆಗಳ, ಜೀವನ ಚಕ್ರ ಕುರಿತಾದ. ಸಾಕ್ಷ್ಯಚಿತ್ರ. ಸುಹಾಸ್ ಪ್ರೇಮ್‌ಕುಮಾರ್ ನಿರ್ದೇಶನದಲ್ಲಿ ಮೂಡಿಬಂದಿರುವ, ಅಪರೂಪದ ಕಪ್ಪೆಗಳ ಕುರಿತ ಸಿನೆಮಾ, ಬರುವ ಮಾರ್ಚ್ 2ನೇ ತಾರೀಖು, ಮಧ್ಯಾಹ್ನ 3 ಗಂಟೆಗೆ, ಬೆಂಗಳೂರಿನ ಮಾಹೆ ಸಂಸ್ಥೆಯ, ರಾಮದಾಸ್ ಪೈ ಸಭಾ ಭವನದಲ್ಲಿ ಪ್ರಥಮ ಬಾರಿಗೆ ಪ್ರದರ್ಶನಗೊಳ್ಳಲಿದೆ. ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ, ಸುಹಾಸ್ ಪ್ರೇಮ್‌ಕುಮಾರ್.

<><><>

**ಚಿಕ್ಕಮಗಳೂರು ಜಿಲ್ಲೆ, ಮುಳ್ಳಯ್ಯನಗಿರಿ** ಪರ್ವತ ಶ್ರೇಣಿಯ, ಚಂದ್ರದ್ರೋಣ ಪರ್ವತದಲ್ಲಿ, ಕಾಡ್ಗಿಚ್ಚು ಹಬ್ಬಿ, 25 ಎಕರೆಗೂ ಹೆಚ್ಚು ಅರಣ್ಯ ಪ್ರದೇಶ ನಾಶವಾಗಿದೆ. ಸೀತಾಳಯ್ಯನಗಿರಿ ಸಮೀಪದ ಬೆಟ್ಟಕ್ಕೆ, ಬೆಂಕಿ ತಗುಲಿದ ಪರಿಣಾಮ, ಔಷಧೀಯ ಸಸ್ಯಗಳು, ಬೆಂಕಿಗೆ ಆಹುತಿಯಾಗಿವೆ ಎಂದು, ಚಿಕ್ಕಮಗಳೂರು ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ರಮೇಶ್ ಬಾಬು ತಿಳಿಸಿದ್ದಾರೆ.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಸದ್ಗುರು** ಶ್ರೀ ಸಿದ್ಧಾರೂಢ ಸ್ವಾಮೀಜಿ ಅವರ 190ನೇ ಹಾಗೂ ಶ್ರೀ ಗುರುನಾಥಾರೂಢರ 115ನೇ ಜಯಂತ್ಯುತ್ಸವ ಮತ್ತು ಶ್ರೀ ಸಿದ್ಧಾರೂಢರ, 'ಕಥಾಮೃತದ ಶತಮಾನೋತ್ಸವ'

ಕಾರ್ಯಕ್ರಮ, ಇಂದಿನಿಂದ 26ನೇ ತಾರೀಖಿನ ವರೆಗೆ, ಶ್ರೀ ಸಿದ್ಧಾರೂಢ ಮಠದಲ್ಲಿ ಆಯೋಜಿತವಾಗಿದೆ. ಇದೇ 26 ರಿಂದ ಮಾರ್ಚ್ 1ರ ವರೆಗೆ, ಶ್ರೀ ಸಿದ್ಧಾರೂಢ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿದೆ. 27 ರಂದು ಸಂಜೆ ರಥೋತ್ಸವ ಜರುಗಲಿದೆ.

<><><>

**ಶ್ರೀ ರಾಮಕೃಷ್ಣ ಪರಮಹಂಸರ** ಜಯಂತ್ಯುತ್ಸವದ ಹಿನ್ನೆಲೆ, ಪ್ರಧಾನಮಂತ್ರಿ ಮೋದಿ ಗೌರವ ನಮನ ಸಲ್ಲಿಸಿದ್ದಾರೆ.

<><><>

**ಛತ್ರಪತಿ ಶಿವಾಜಿ ಮಹಾರಾಜರ** 395ನೇ ಜಯಂತ್ಯುತ್ಸವವನ್ನು ಇಂದು ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತಿದೆ.

<><><>

**ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕಿನ** ಬನವಾಸಿಯಲ್ಲಿ ಜನಿಸಿದ, ಕರ್ನಾಟಕದ ಗಾಂಧಿ ಎಂದೇ ಪ್ರಸಿದ್ಧರಾದ, ಹರ್ಡೇಕರ್ ಮಂಜಪ್ಪನವರ ಜಯಂತ್ಯುತ್ಸವವನ್ನು, ಬಸವೇಶ್ವರ ಸೇವಾದಳದ ವತಿಯಿಂದ ಆಚರಿಸಲಾಯಿತು.

<><><>

- **ರಾಜ್ಯ ಸರ್ಕಾರದಿಂದ,** 32 ಲಕ್ಷ ಅನಧಿಕೃತ ಬಡಾವಣೆಗಳಿಗೆ, 'ಬಿ ಖಾತಾ' ನೀಡುವ, ಒಂದಾವರ್ತಿ, ವಿಶೇಷ ಅಭಿಯಾನ.
- **ಉದಯಪುರದಲ್ಲಿ ಆಯೋಜಿತ,** ರಾಜ್ಯ ಜಲ ಸಂಪನ್ಮೂಲ ಸಚಿವರ ಸಮ್ಮೇಳನ, ಇಂದು ಸಮಾರೋಪ.
- **ಪ್ರಧಾನಮಂತ್ರಿ ಕುಸುಮ್-ಸಿ ಯೋಜನೆ;** 3 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ, ರಾಜ್ಯದ ಗುರಿ.
- **ಬೆಂಗಳೂರಿನಲ್ಲಿ, 26 ರಿಂದ 28ರ ವರೆಗೆ,** KITE' ಪ್ರವಾಸೋದ್ಯಮ ಪ್ರದರ್ಶಿನಿ.

<><><>